೧) ಮಾರುಕಟ್ಟೆಯಲ್ಲಿ ರೈತರು ಬೆಳೆದ ಆಲೂಗಡ್ಡೆ ಹಾಗೂ ಈರುಳ್ಳಿಗೆ ಬೆಲೆ ಸಿಗದೆ ಇದ್ದಾಗ ಸಂಘವು ಮಾರುಕಟ್ಟೆ ಮಧ್ಯ ಪ್ರವೇಶ ಯೋಜನೆಯಲ್ಲಿ 1996-97ನೇ ಸಾಲಿನಲ್ಲಿ ಆಲೂಗಡ್ಡೆಯನ್ನು ಮತ್ತು ಈರುಳ್ಳಿಯನ್ನು ಖರೀದಿಸಿದೆ. 1997-98ನೇ ಸಾಲಿನಲ್ಲಿ ಆಲೂಗಡ್ಡೆಯನ್ನು ಖರೀದಿಸಿದ್ದು, ವಿವರಗಳು ಈ ಕೆಳಕಂಡಂತಿದೆ.

| | ಆಲೂಗಡ್ಡೆ | | ಈರುಳ್ಳಿ | |
|---|---|---|---|---|
| ವರ್ಷ | ಪರಿಮಾಣ ಟನ್‌ಗಳಲ್ಲಿ | ಖರೀದಿ ಮೊತ್ತ ರೂ. ಲಕ್ಷಗಳಲ್ಲಿ | ಪರಿಮಾಣ ಟನ್‌ಗಳಲ್ಲಿ | ಖರೀದಿ ಮೊತ್ತ ಲಕ್ಷ ರೂಗಳಲ್ಲಿ |
| 1996-97 | 3391 | 146.87 | 436 | 14.63 |
| 1997-98 | 2991 | 104.00 | - | - |

**ಹಿರೇಕೆರೂರಿನಿಂದ ಕಮಲಾಪುರಕ್ಕೆ ಸಂಚರಿಸುವ ಬಸ್ ಟ್ರಿಪ್ ರದ್ದುಗೊಳಿಸಿರುವುದು**

728 - ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಹಿರೇಕೆರೂರಿನಿಂದ ಪ್ರತಿ ದಿನ ಮಧ್ಯಾಹ್ನ ಕಮಲಾಪುರಕ್ಕೆ ಸಂಚರಿಸುವ ಬಸ್, ದಿನಾಂಕ 1-1-98 ರಿಂದ 31-3-98ರವರೆಗೆ ಎಷ್ಟು ಟ್ರಿಪ್‌ಗಳನ್ನು ರದ್ದು ಮಾಡಲಾಗಿದೆ?*

*ಆ) ರದ್ದು ಮಾಡದೆ ಈ ಮಾರ್ಗದಲ್ಲಿ ಬಸ್ ಸಂಚರಿಸಲು ಸರ್ಕಾರವು ಕ್ರಮ ಕೈಗೊಳ್ಳುವುದೇ?*

ಶ್ರೀ ಪಿ.ಜಿ.ಆರ್ ಸಿಂಧ್ಯ (ಸಾರಿಗೆ ಸಚಿವರು) :

ಅ) ಜನವರಿ 1998 ರಿಂದ ಮಾರ್ಚ್ 1998ರವರೆಗೆ ಈ ಮಾರ್ಗದಲ್ಲಿ 66 ಟ್ರಿಪ್‌ಗಳನ್ನು ರದ್ದು ಗೊಳಿಸಲಾಗಿದೆ.

ಆ) ರದ್ದು ಮಾಡದೆ ಸದರಿ ಅನುಸೂಚಿಯನ್ನು ಕಾರ್ಯಾಚರಣೆಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

**INTER STATE BUSES FROM BASAVAKALYANA**

729 - Sri Basavaraja Patil Attur (Basavakalyana) : Will be Hon. Transport Minister be pleased to state?

*a) What action has been taken by the Govt. to operate inter state buses from Basavakalyan to Sholapur Latur and Mumbai in Maharashtra and to Srishylam and Tirupati in Andhra Pradesh?*

*b) Details of buses operated on interstate routes to be furnished;*

Sri P.G.R. SINDHIA (Minister for Transport) :

a) KSRTC is operating 3 services 13 RTS from Humnabad to Latur via Basavakalyan. Further, the route Humnabad-Sholapur via Basavakalyan and Basavakalyan-Hubli via Sholapur have been proposed for inclusion in the I - Supplemental Interstate Transport Agreement to be entered into between the States of Karnataka and Maharashtra. The other routes require mutual consent of the Govt. of Karnataka and the Govt. of the States concerned on reciprocal basis for which the Govt. of Karnataka has to enter into Reciprocal Transport Agreement with the neighbouring States. Services on these routes could be operated only when they are included in the Interstate Agreement after the need is established.

b) KSRTC is operating its services to the neighbouring states viz., Andhra Pradesh, Maharashtra, Tamilnadu, Kerala and Goa on the strength of the various Interstate Reciprocal Transport Agreements entered into by the Govt. of Karnataka with the Govts. of concerned States. The details of buses operated to these State by KSRTC is as follows:

| | State | Routes | Buses | Kms. operated in that state |
|---|---|---|---|---|
| a) | Andhra Pradesh | 248 | 429 | 66,005 |
| b) | Maharashtra | 289 | 497 | 69,424 |
| c) | Tamilnadu | 32 | 92 | 17,688 |
| d) | Kerala | 23 | 56 | 7,588 |
| e) | Goa | 42 | 76 | 8,374 |
| | | **634** | **1,150** | **1,69,079** |

**ಆರಾಧನಾ ಯೋಜನೆಯಲ್ಲಿ ಹಣ ಬಿಡುಗಡೆ**

730 - ಡಾ||ಎಂ. ಪಿ. ಕರ್ಕಿ (ಕುಮಟಾ) : ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

*ಅ) 1995-96, 96-97, 97-98ನೇ ಸಾಲಿನಲ್ಲಿ ಆರಾಧನಾ ಯೋಜನೆಯಡಿ ಬಿಡುಗಡೆ ಮಾಡಲಾಗಿದ್ದ ಹಣವೆಷ್ಟು ?*